**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ. 4069/2023</u>**

**ದಿನಾಂಕಃ 07.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು ಃ | ರಮೇಶ | ಚಾಸಾ-3, ಪ್ರಾಸ.-2 |
| ತಂದೆಯ ಹೆಸರು ಃ | ಬಸವರಾಜ | |
| ವಯಸ್ಸು ಃ | 44 ವರ್ಷ | |
| ಉದ್ಯೋಗ ಃ | ಕೂಲಿ | |
| ವಾಸ ಃ | ಅಜ್ಜಂಪುರ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ಮೃತ ವ್ಯಕ್ತಿ ನನಗೆ ಗೊತ್ತು. ಚಾಸಾ-2 ಮತ್ತು 4 ರವರ ಪರಿಚಯ ಇದೆ. ನನ್ನ ಸ್ನೇಹಿತನ ತಮ್ಮ ಅಶೋಕನಿಗೆ ಸುಮಾರು ಒಂದೂವರೆ ವರ್ಷದ ಹಿಂದೆ ಅಪಘಾತವಾಗಿರುವ ವಿಚಾರ ತಿಳಿದು ಆಸ್ಪತ್ರೆಗೆ ಹೋಗಿ ನೋಡಿರುತ್ತೇನೆ. ಅವರು ಮೃತ ಪಟ್ಟಿದ್ದು ಅವರ ತಲೆಗೆ, ಮುಖಕ್ಕೆ ತೀವ್ರ ಗಾಯವಾಗಿತ್ತು. ಚಾಸಾ-7 ರಿಂದ 12 ರವರು ಆಸ್ಪತ್ರೆಯಲ್ಲಿದ್ದರು, ಆ ಸಮಯದಲ್ಲಿ ಶವ ಪಂಚನಾಮೆಯನ್ನು ಸಂಜೆ 6.00 ರಿಂದ 6.30 ರವರೆಗೆ ಜರುಗಿಸಿರುತ್ತಾರೆ. ಶವ ಪಂಚನಾಮೆ ಸಮಯದಲ್ಲಿ ಛಾಯಾಚಿತ್ರವನ್ನು ತೆಗೆದಿರುತ್ತಾರೆ. ಸಾಕ್ಷಿಯು ಶವ ಪಂಚನಾಮೆ ಸಮಯದಲ್ಲಿ ತೆಗೆದ 6 ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-3 ರಿಂದ 8 ಎಂದು ಗುರುತಿಸಲಾಯಿತು. ಇದಾದ 2 ದಿನಗಳ ನಂತರ ಅಪಘಾತವಾದ ಸ್ಥಳಕ್ಕೆ ನನಗೆ, ಚಾಸಾ-2 ಮತ್ತು 4 ರವರಿಗೆ ಪೋಲಿಸರು ಸ್ಥಳ ಪಂಚನಾಮೆಗೆ ಸಹಕರಿಸುವಂತೆ ಕೋರಿರುತ್ತಾರೆ. ಘಟನಾ ಸ್ಥಳಕ್ಕೆ ಹೋಗಿ ಚಾಸಾ-2 ರವರು ತೋರಿಸಿದ ಸ್ಥಳದಲ್ಲಿ ಮಧ್ಯಾಹ್ನ 12.00 ರಿಂದ 1.30 ರವರೆಗೆ ಸ್ಥಳ ಮಹಜರ್ ಜರುಗಿಸಿರುತ್ತಾರೆ. ಸ್ಥಳ ಮಹಜರ್ ಸಮಯದಲ್ಲಿ ಛಾಯಾಚಿತ್ರವನ್ನು ತೆಗೆಸಿರುತ್ತಾರೆ. ಸಾಕ್ಷಿಗೆ ಸ್ಥಳ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-9 ಎಂದು, ಸಾಕ್ಷಿ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ನನ್ನ ಜೊತೆಯಲ್ಲಿ ಚಾಸಾ-2 ಮತ್ತು 4 ರವರು ನಿಪಿ-9 ಕ್ಕೆ ಸಹಿ ಮಾಡಿರುತ್ತಾರೆ. ನಿಪಿ-9 ರಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ. ಸಾಕ್ಷಿಯು ಸ್ಥಳ ಮಹಜರ್ ಸಮಯದಲ್ಲಿ ತೆಗೆಯಲಾದ 3 ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-10 ರಿಂದ 12 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ**

ದಿಃ 18.08.2023 ರಂದು ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ಅಪಘಾತವಾದ ಬಗ್ಗೆ ಚಾಸಾ-1 ರವರು ಪೋಲಿಸರಿಗೆ ದೂರು ನೀಡಿರುತ್ತಾರೆ ಎಂದರೆ ಸರಿ. ಅಪಘಾತಕ್ಕೆ ಸಂಬಂಧಿಸಿದಂತೆ ನನಗೆ ಮತ್ತು ಚಾಸಾ-4 ರವರಿಗೆ ನೋಟಿಸನ್ನು ನೀಡಿ ಸ್ಥಳ ಮಹಜರ್ ಗೆ ಸಹಕರಿಸುವಂತೆ ಕೋರಿಕೊಂಡಿರುತ್ತಾರೆ ಎಂದರೆ ಸರಿ. ದಿಃ 20.08.2023 ರಂದು ಸ್ಥಳ ಮಹಜರ್ ಸಮಯದಲ್ಲಿ ಹಾಜರಿದ್ದೆ ಎಂದರೆ ಸರಿ. ಮಧ್ಯಾಹ್ನ 12.30 ರಿಂದ 1.30 ರವರೆಗೆ ಪೋಲಿಸರು ಸ್ಥಳ ಮಹಜರ್ ಜರುಗಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ದಿಃ 20.08.2023 ರ ನೋಟಿಸನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-13 ಎಂದು, ಸಾಕ್ಷಿ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಶ್ರೀ ಸಿ ಜೆ ಎಂ. ಆರೋಪಿ ಪರ ವಕೀಲರಿಂದಃ**

ಪೋಲಿಸರ ಕೋರಿಕೆ ಮೇರೆಗೆ ಛಾಯಾಚಿತ್ರದಲ್ಲಿ ನಾನು ನಿಂತಿರುತ್ತೇನೆ ಎಂದರೆ ಸರಿ. ಶವ ತನಿಖೆಗೆ ಸಂಬಂಧಿಸಿದಂತೆ ನಾನು ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ. ಶವ ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳ ಬಗ್ಗೆ ಮಾಹಿತಿ ಇಲ್ಲಾ ಎಂದರೆ ಸರಿ. ಅಪಘಾತವಾದ 2 ದಿನಗಳ ನಂತರ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಸ್ಥಳ ಪಂಚನಾಮೆ ಮಾಡುವ ಸಮಯದಲ್ಲಿ 4 ಜನ ಪೋಲಿಸರು ಮತ್ತು ನಾವು 3 ಜನ ಇದ್ದೆವು. ಪೋಲಿಸರ ಹೆಸರು ತಿಳಿದಿಲ್ಲ. ಚಾಸಾ-2 ಮತ್ತು 4 ಹಾಗೂ ನಾನು ಹಾಜರಿದ್ದೆವು. ನಿಪಿ-9 ರ ಪಂಚನಾಮೆಯನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲಾ ಎಂದರೆ ಸರಿ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಮಾಹಿತಿ ಇಲ್ಲಾ ಎಂದರೆ ಸರಿ. ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ-9 ಕ್ಕೆ ನಾನು, ಚಾಸಾ-2 ಮತ್ತು 4 ಸಹಿ ಮಾಡಿರುತ್ತೇವೆ. ಬೇರೆ ಯಾರು ಸಹಿ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲಾ. ಮೃತ ವ್ಯಕ್ತಿಯು ನನ್ನ ಸ್ನೇಹಿತನಾದ ಕಾರಣ ಸ್ಥಳ ಪಂಚನಾಮೆ ಮಾಡದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-9 ರಲ್ಲಿರುವ ಕಚ್ಚಾ ನಕ್ಷೆಯನ್ನು ನೋಡಿರುತ್ತೇನೆ. ನಿಪಿ-9 ರಲ್ಲಿ ಬರೆದಿರುವ ಕೃತ್ಯ ನಡೆದ ಸ್ಥಳ ಇದೇ ಎಂದು ಪೋಲಿಸರು ತೋರಿಸಿರುತ್ತಾರೆ. ಸದರಿ ಸ್ಥಳವು ಬೀರೂರು ಕಡೆಯಿಂದ ಬರುವಾಗ ರಸ್ತೆಯ ಎಡಭಾಗದಲ್ಲಿರುತ್ತದೆ ಎಂದರೆ ಸರಿ. ಕಡೂರು ಕಡೆಯಿಂದ ಬರುವಾಗ ರಸ್ತೆಯ ಬಲಭಾಗದಲ್ಲಿ ಅಪಘಾತದ ಸ್ಥಳ ಸಿಗುತ್ತದೆ ಎಂದರೆ ಸರಿ. ನಿಪಿ-9 ರಲ್ಲಿ ಬರೆದಿರುವ ಬೇರೆ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲಾ ಎಂದರೆ ಸರಿ. ನಿಪಿ-10 ರ ಛಾಯಾಚಿತ್ರದಲ್ಲಿ ನಾವುಗಳು ಬೀರೂರು ಕಡೆ ಮುಖ ಮಾಡಿಕೊಂಡು ನಿಂತಿರುತ್ತೇವೆ ಎಂದರೆ ಸರಿ. ನಿಪಿ-12 ರ ಛಾಯಾಚಿತ್ರದಲ್ಲಿ ನಾವುಗಳು ಕಡೂರು ಕಡೆ ಮುಖ ಮಾಡಿಕೊಂಡು ನಿಂತಿರುತ್ತೇವೆ ಎಂದರೆ ಸರಿ. ನಿಪಿ-10 ರಿಂದ 12 ರ ಛಾಯಾಚಿತ್ರಗಳಲ್ಲಿ ಅಪಘಾತವಾದ ಸ್ಥಳ ಕಾಣುತ್ತದೆ ಎಂದರೆ ಸರಿ. ನಿಪಿ-12 ರ ಛಾಯಾಚಿತ್ರದಲ್ಲಿ ಕೃತ್ಯ ನಡೆದ ಸ್ದಳವು ಬೀರೂರು ಕಡೆಯಿಂದ ಬರುವಾಗ ರಸ್ತೆಯ ಎಡಭಾಗದಲ್ಲಿ ಸಿಗುತ್ತದೆ ಎಂದರೆ ಸರಿ. ನಿಪಿ-12 ರಲ್ಲಿ ರಸ್ತೆ

ಮದ್ಯದಲ್ಲಿ ಹಾಕಿರುವ ಬಿಳಿ ಬಣ್ಣದ ಗೆರೆ ಕಾಣುತ್ತದೆ ಎಂದರೆ ಸರಿ. ಸದರಿ ಬಿಳಿ ಬಣ್ಣದ ಗೆರೆಯಿಂದ ಸುಮಾರು 4-5 ಅಡಿ ಅಂತರದಲ್ಲಿ ಅಪಘಾತದ ಸ್ಥಳ ತೋರಿಸಿರುತ್ತಾರೆ ಎಂದರೆ ಸರಿ. ನಿಪಿ-9 ರಲ್ಲಿ ಬರೆದಿರುವ ಇತರೇ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.